**4 ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ**

**ಸಿ.ಸಿ. ನಂ. 16092/2022**

ಫಿರ್ಯಾದಿದಾರರುಃ ರಾಜ್ಯ ಸರ್ಕಾರದ ಪರವಾಗಿ
ಜ್ಞಾನಭಾರತಿ ಆರಕ್ಷಕ ಠಾಣೆ

ವಿರುದ್ಧ

ಆರೋಪಿಗಳುಃ 1) ಮಂಜು ಬಾಣಗೆರೆ ,
ಬಿನ್ ಲೇಟ್ ಚಿಕ್ಕೀರಪ್ಪ , 39 ವರ್ಷ

ವಿಳಾಸ ನಂ.30/31, 3 ನೇ ಕ್ರಾಸ್, 3 ನೇ ಮೇನ್,
ಗಂಗಮ್ಮ ಗಾರ್ಡನ್, ನಾಗರಬಾವಿ 2 ನೇ ಹಂತ ,
ಬೆಂಗಳೂರು-72.

2) ಧನಂಜಯ್ಯ ,
ಬಿನ್ ಲೇಟ್ ಚಿಕ್ಕೀರಪ್ಪ , 36 ವರ್ಷ
ವಾಸಃ ನಂ.ಇಲ್ಲಾ , ದೊಡ್ಡಬಾಣಗೆರೆ ಗ್ರಾಮ,
ಚಿಕ್ಕಬಾಣಗೆರೆ ಅಂಚೆ, ಶಿರಾ ತಾಲ್ಲೂಕು,
ತುಮಕೂರು ಜಿಲ್ಲೆ.

**ದೋಷಾರೋಪಣೆ**

ಬೆಂಗಳೂರು ನಗರದ IV ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿ ವಿದ್ಯಾ ಕೆ. ಆದ ನಾನು, ಆರೋಪಿಯಾದ ನೀವು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಅಪರಾಧ ಎಸಗಲಾಗಿದೆ ಎನ್ನುವ ಆರೋಪ ಇರುವುದರಿಂದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಿದ್ದೇನೆ.

1 ನೇ ಆರೋಪಿಯಾದ ನೀವು ಬೆಂಗಳೂರು ನಗರ ಜ್ಞಾನಭಾರತಿ ಪೊಲೀಸ್ ಠಾಣಾ ಸರಹದ್ದಿನ ನಾಗರಭಾವಿಯ 12 ನೇ ಬ್ಲಾಕ್ ನಲ್ಲಿರುವ ನಂ.220, ಸಿಗಂದೂರಮ್ಮ ಕಾಂಪ್ಲೆಕ್ಸ್ ನಲ್ಲಿರುವ ಟಿವಿ-06 ಕಮ್ಯುನಿಕೇಷನ್ ಪ್ರೈವೇಟ್ ಲಿಮಿಟೆಡ್ ಎಂಬ ಖಾಸಗಿ ಸುದ್ದಿ ವಾಹಿನಿ ನಿರ್ದೇಶಕರಾಗಿದ್ದು ನಿಮಗೆ ಸದರಿ ಸಂಸ್ಥೆಯ ದಿನನಿತ್ಯದ ಕೆಲಸ ಕಾರ್ಯಗಳ ಜೊತೆಗೆ ಸಿಬ್ಬಂದಿಗಳ ನಿರ್ವಹಣೆ ಹಾಗೂ ಬ್ಯಾಂಕ್ ವ್ಯವಹಾರ, ಮಾರ್ಕೆಟಿಂಗ್ ವ್ಯವಹಾರ ಮತ್ತು ಸಂಸ್ಥೆಗೆ ಅಗತ್ಯವಿರುವ ಪರಿಕರಗಳನ್ನು ಖರೀದಿಸಿರುವ ವ್ಯವಹಾರವನ್ನು ಮಾಡಲು ನಿಯೋಜಿಸಲಾಗಿದ್ದಾಗ್ಯೂ , ನೀವು ಸದರಿ ಚಾ.ಸಾ.1 ರವರ

ಸುದ್ದಿ ವಾಹಿನಿ ಸಂಸ್ಥೆಯಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ನಿಮ್ಮ ತಮ್ಮನಾದ 2 ನೇ ಆರೋಪಿಯನ್ನು ಚಾ.ಸಾ.1 ರವರಿಗೆ ಪರಿಚಯಿಸಿ ಸಂಸ್ಥೆಯ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವರದಿಗಳನ್ನು ನೇಮಕ ಮಾಡಲು ಹಾಗೂ ಜಾಹೀರಾತುಗಳನ್ನು ಪಡೆಯುವ ಬಗ್ಗೆ ಕೆಲಸಗಾರನಾಗಿ ನೇಮಕ ಮಾಡಿಕೊಂಡಿದ್ದಾಗ್ಯೂ , ಆರೋಪಿಗಳಾದ ನೀವು ಸದರಿ ಸುದ್ದಿ ವಾಹಿನಿಯ ಜವಾಬ್ದಾರಿಯುತ ನಿರ್ದೇಶಕ ಹಾಗೂ ಕೆಲಸಗಾರನಾಗಿ ಕರ್ತವ್ಯ ನಿರ್ವಹಿಸುವಾಗ ಸದರಿ ಸಂಸ್ಥೆಗೆ ಬರುವ ಹಾಹೀರಾತು ಪ್ರಸಾರ ಮಾಡಲು ಸಂಗ್ರಹಿಸಲಾಗುತ್ತಿದ್ದ ಹಣವನ್ನು ಲಪಟಾಯಿಸುವ ಉದ್ದೇಶದಿಂದ ಹಾಗೂ ಚಾ.ಸಾ.1 ಮತ್ತು ಟಿವಿ-06 ಕಮ್ಯುನಿಕೇಷನ್ ಪ್ರೈವೇಟ್ ಲಿಮಿಟೆಡ್ ಖಾಸಗಿ ವಾಹಿನಿಗೆ ವಂಚಿಸುವ ಸಮಾನ ಉದ್ದೇಶದಿಂದ ಚಾ.ಸಾ.1 ಮತ್ತು 4 ರವರಿಗೆ ಗೊತ್ತಾಗದಂತೆ ಒಳಸಂಚು ನಡೆಸಿ ಸದರಿ ಸುದ್ದಿ ವಾಹಿನಿಗೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವರದಿಗಾರರು ಗ್ರಾಹಕರಿಂದ ಸಂಗ್ರಹಿಸಲಾಗುತ್ತಿದ್ದ ಜಾಹೀರಾತುಗಳ ಹಣವನ್ನು

ಸಂಸ್ಥೆಯ ಅಧಿಕೃತ ಬ್ಯಾಂಕ್ ಖಾತೆಗೆ ಜಮಾ ಮಾಡದೇ ನಿಮ್ಮ ವೈಯಕ್ತಿಕ ಹೆಸರಿನಲ್ಲಿರುವ ಐಸಿಐಸಿಐ ಬ್ಯಾಂಕ್ ಖಾತೆ ನಂ.230101504113, ಹೆಚ್‌ಡಿಎಫ್‌ಸಿ ಬ್ಯಾಂಕ್ ಖಾತೆ ನಂ.501000370307405, ಕೋಟಕ್ ಮಹೀಂದ್ರ ಬ್ಯಾಂಕ್ ಖಾತೆ ನಂ.3412066046, ಯೆಸ್ ಬ್ಯಾಂಕ್ ಖಾತೆ ನಂ.063991900004930, ಎಸ್‌ಬಿಐ ಬ್ಯಾಂಕ್ ಖಾತೆ ಸಂ.20096466334 ರ ಹಾಗೂ ಆಕ್ಸಿಸ್ ಬ್ಯಾಂಕ್ ಖಾತೆ ಗಳಿಗೆ ಗೂಗಲ್ ಪೇ , ಫೋನ್ ಪೇ, ಪೇಟಿಎಂ ಮತ್ತು ಭೀಮ್ ಆಪ್ ಮೂಲಕ ವಹಿವಾಟು ನಡೆಸಿ ಚಾ.ಸಾ.1 ರವರ ಸುದ್ದಿ ವಾಹಿನಿ ಸಂಸ್ಥೆಗೆ ಸುಮಾರು 20 ಲಕ್ಷ ರೂಗಳಿಗೂ ಹೆಚ್ಚು ಹಣವನ್ನು ವರ್ಗಾಯಿಸಿಕೋಂಡು ನಿಮ್ಮ ಸ್ವಂತಕ್ಕೆ ದುರ್ವಿನಿಯೋಗಿಸಿಕೊಂಡು ಸಂಸ್ಥೆಗೆ ಮತ್ತು ಚಾ.ಸಾ.1 ರವರಿಗೆ ಅಪರಾಧಿಕ ನಂಬಿಕೆ ದ್ರೋಹ ಮಾಡಿ ಭಾರತೀಯ ದಂಡ ಸಂಹಿತೆ ಕಲಂ.408 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವುದಾಗ್ಯೂ ದೋಷಾರೋಪಣೆ ಮಾಡಲಾಗಿದೆ.

ಎರಡನೆಯದಾಗಿ ಮೇಲ್ಕಂಡ, ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಖಾಸಗಿ ಸುದ್ದಿ ವಾಹಿನಿ ಹಾಗೂ ಚಾ.ಸಾ.1 ರವರಿಗೆ ವಂಚಿಸಿದಲ್ಲಿ ಸದರಿ ಸುದ್ದಿ ವಾಹಿನಿಗೆ ಅಪಾರ ನಷ್ಟವುಂಟಾಗುತ್ತದೆಂದು ತಿಳಿದಿದ್ದರೂ ಸಹ ಸದರಿ ಸಂಸ್ಥೆಯ ಹಿತವನ್ನು ರಕ್ಷಿಸುವ ಸಂಪೂರ್ಣ ಜವಾಬ್ದಾರಿ ನಿಮ್ಮದಾಗಿದ್ದರೂ ಸಹ ವಂಚಿಸಿ ಭಾರತೀಯ ದಂಡ ಸಂಹಿತೆ ಕಲಂ.418 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವುದಾಗ್ಯೂ ದೋಷಾರೋಪಣೆ ಮಾಡಲಾಗಿದೆ.

ಮೂರನೆಯದಾಗಿ ಮೇಲ್ಕಂಡ, ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಾಕ್ಷಿ-1 ರವರ ಸದರಿ ಸಂಸ್ಥೆಗೆ ಬರುವ ಹಾಹೀರಾತು ಪ್ರಸಾರ ಮಾಡಲು ಸಂಗ್ರಹಿಲಾಗುತ್ತಿದ್ದ ಹಣವನ್ನು ಲಪಟಾಯಿಸುವ ಉದ್ದೇಶದಿಂದ ಹಾಗೂ

ಚಾ.ಸಾ.1 ಮತ್ತು ಟಿವಿ-06 ಕಮ್ಯುನಿಕೇಷನ್ ಪ್ರೈವೇಟ್ ಲಿಮಿಟೆಡ್ ಖಾಸಗಿ ವಾಹಿನಿಗೆ ವಂಚಿಸುವ ಸಮಾನ ಉದ್ದೇಶದಿಂದ ಚಾ.ಸಾ.1 ಮತ್ತು 4 ರವರಿಗೆ ಗೊತ್ತಾಗದಂತೆ ಒಳಸಂಚು ನಡೆಸಿ ಸದರಿ ಸುದ್ದಿ ವಾಹಿನಿಗೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವರದಿಗಾರರು ಗ್ರಾಹಕರಿಂದ ಸಂಗ್ರಹಿಸಲಾಗುತ್ತಿದ್ದ ಜಾಹೀರಾತುಗಳ ಹಣವನ್ನು ಸಂಸ್ಥೆಯ ಅಧಿಕೃತ ಬ್ಯಾಂಕ್ ಖಾತೆಗೆ ಜಮಾ ಮಾಡದೇ ನಿಮ್ಮ ವೈಯಕ್ತಿಕ ಹೆಸರಿನಲ್ಲಿರುವ ಐಸಿಐಸಿಐ ಬ್ಯಾಂಕ್ ಖಾತೆ ನಂ.230101504113, ಹೆಚ್‌ಡಿಎಫ್‌ಸಿ ಬ್ಯಾಂಕ್ ಖಾತೆ ನಂ.501000370307405, ಕೋಟಕ್ ಮಹೀಂದ್ರ ಬ್ಯಾಂಕ್ ಖಾತೆ ನಂ.3412066046, ಯೆಸ್ ಬ್ಯಾಂಕ್ ಖಾತೆ ನಂ.063991900004930, ಎಸ್‌ಬಿಐ ಬ್ಯಾಂಕ್ ಖಾತೆ ಸಂ.20096466334 ರ ಹಾಗೂ ಆಕ್ಸಿಸ್ ಬ್ಯಾಂಕ್ ಖಾತೆ ಗಳಿಗೆ ಗೂಗಲ್ ಪೇ , ಫೋನ್ ಪೇ, ಪೇಟಿಎಂ ಮತ್ತು ಭೀಮ್ ಆಪ್ ಮೂಲಕ ವಹಿವಾಟು ನಡೆಸಿ ಚಾ.ಸಾ.1 ರವರ ಸುದ್ದಿ ವಾಹಿನಿ ಸಂಸ್ಥೆಗೆ ಸುಮಾರು 20 ಲಕ್ಷ ರೂಗಳಿಗೂ ಹೆಚ್ಚು ಹಣವನ್ನು

ವರ್ಗಾಯಿಸಿಕೋಂಡು ನಿಮ್ಮ ಸ್ವಂತಕ್ಕೆ ದುರ್ವಿನಿಯೋಗಿಸಿಕೊಂಡು ಸಂಸ್ಥೆಗೆ ಮತ್ತು ಚಾ.ಸಾ.1 ರವರಿಗೆ ವಂಚಿಸಿ ಭಾರತೀಯ ದಂಡ ಸಂಹಿತೆ ಕಲಂ.420 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವುದಾಗ್ಯೂ ದೋಷಾರೋಪಣೆ ಮಾಡಲಾಗಿದೆ.

ಕೊನೆಯದಾಗಿ ಮೇಲ್ಕಂಡ, ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಾಕ್ಷಿ-1 ರವರ ಸದರಿ ಸಂಸ್ಥೆಗೆ ಬರುವ ಹಾಹೀರಾತು ಪ್ರಸಾರ ಮಾಡಲು ಸಂಗ್ರಹಿಲಾಗುತ್ತಿದ್ದ ಹಣವನ್ನು ಲಪಟಾಯಿಸುವ ಉದ್ದೇಶದಿಂದ ಹಾಗೂ ಚಾ.ಸಾ.1 ಮತ್ತು ಟಿವಿ-06 ಕಮ್ಯುನಿಕೇಷನ್ ಪ್ರೈವೇಟ್ ಲಿಮಿಟೆಡ್ ಖಾಸಗಿ ವಾಹಿನಿಗೆ ವಂಚಿಸುವ ಸಮಾನ ಉದ್ದೇಶದಿಂದ ಚಾ.ಸಾ.1 ಮತ್ತು 4 ರವರಿಗೆ ಗೊತ್ತಾಗದಂತೆ ಒಳಸಂಚು ನಡೆಸಿ ಭಾರತೀಯ ದಂಡ ಸಂಹಿತೆ ಕಲಂ.120(ಬಿ) ಸಹವಾಚಕ ಕಲಂ 34

ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವುದಾಗ್ಯೂ ದೋಷಾರೋಪಣೆ ಮಾಡಲಾಗಿದೆ.

ಮತ್ತು ನೀವು ಈ ಮೇಲ್ಕಂಡ ದೋಷಾರೋಪಣೆಯ ಬಗ್ಗೆ ವಿಚಾರಣೆಗೆ ಒಳಪಡಲಿದ್ದೀರಿ ಎಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

(ಆರೋಪಿತರಿಗೆ ಆರೊಪಣೆಯಅಂಶಗಳನ್ನು ವಿಸ್ತ್ರುತವಾಗಿ ತಿಳಿದಿರುವ ಭಾಷೆಯಲ್ಲಿ ವಿಷದ ಪಡಿಸಿ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡ ನಂತರ ಕೊಟ್ಟ ಉತ್ತರವನ್ನು ನಮೂದಿಸಲಾಯಿತು)

ದಿನಾಂಕಃ 04.07.2023

ಬೆಂಗಳೂರು. 4 ನೇ ಹೆ ಮು ಮ ದಂಡಾಧಿಕಾರಿ

**4 ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ**

**ಸಿ.ಸಿ. ನಂ. 16092/2022**

ಫಿರ್ಯಾದಿದಾರರುಃ ರಾಜ್ಯ ಸರ್ಕಾರದ ಪರವಾಗಿ
ಜ್ಞಾನಭಾರತಿ ಆರಕ್ಷಕ ಠಾಣೆ

ವಿರುದ್ಧ

ಆರೋಪಿಃ 1) ಮಂಜು ಬಾಣಗೆರೆ ,
ಬಿನ್ ಲೇಟ್ ಚಿಕ್ಕೀರಪ್ಪ , 39 ವರ್ಷ

**ಆರೋಪಣೆ**

ಪ್ರಶ್ನೆ1) ನಿಮಗೆ ಓದಿ ವಿವರಿಸಿ ಹೇಳಿದ ದೋಷಾರೋಪಣೆ ತಿಳಿಯಿತೆ ?
ಉತ್ತರಃ ಹೌದು ತಿಳಿದಿದೆ

ಪ್ರಶ್ನೆ2) ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗಬಯಸುವಿರಾ ?
ಉತ್ತರಃ ಸುಳ್ಳು ವಿಚಾರಣೆ ಆಗಬೇಕು

ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿಃ 04.07.2023
ಬೆಂಗಳೂರು. 4 ನೇ ಹೆ ಮು ಮ ದಂಡಾಧಿಕಾರಿ

**4 ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ**

**ಸಿ.ಸಿ. ನಂ. 16092/2022**

ಫಿರ್ಯಾದಿದಾರರುಃ ರಾಜ್ಯ ಸರ್ಕಾರದ ಪರವಾಗಿ
ಜ್ಞಾನಭಾರತಿ ಆರಕ್ಷಕ ಠಾಣೆ

ವಿರುದ್ಧ

ಆರೋಪಿಃ 2) ಧನಂಜಯ್ಯ ,
ಬಿನ್ ಲೇಟ್ ಚಿಕ್ಕೀರಪ್ಪ , 36 ವರ್ಷ

**ಆರೋಪಣೆ**

ಪ್ರಶ್ನೆ1) ನಿಮಗೆ ಓದಿ ವಿವರಿಸಿ ಹೇಳಿದ ದೋಷಾರೋಪಣೆ ತಿಳಿಯಿತೆ ?
ಉತ್ತರಃ ಹೌದು ತಿಳಿದಿದೆ

ಪ್ರಶ್ನೆ2) ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಇಲ್ಲವೇ ವಿಚಾರಣೆಯಾಗಬಯಸುವಿರಾ ?
ಉತ್ತರಃ ಸುಳ್ಳು ವಿಚಾರಣೆ ಆಗಬೇಕು

ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ ನಂತರ ಅವರು ನೀಡಿದ ಉತ್ತರಗಳನ್ನು ಸರಿಯಾಗಿ ಬರೆದುಕೊಂಡಿರುವೆನೆಂದು ದೃಢೀಕರಿಸುತ್ತೇನೆ.

ದಿಃ 04.07.2023
ಬೆಂಗಳೂರು. 4 ನೇ ಹೆ ಮು ಮ ದಂಡಾಧಿಕಾರಿ